# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು, (ರಾ.ರಾ.ನಗರ) ವಲಯ, ಕಲ್ಯಾಣ ವಿಭಾಗ,
18ನೇ ಕ್ರಾಸ್, ಐಡಿಯಲ್ ಹೋಮ್ಸ್ ಟೌನ್‌ಶಿಫ್,ಬೆಂಗಳೂರು-560 098.

Call-2

ಸಂಖ್ಯೆ: ಜಂ.ಆ.(ರಾರಾನವ)/ಕ.ಶಾ./ಡೇ-ನಲ್ಮ್/ಪಿಆರ್/126/2021-22 ದಿನಾಂಕ:27/03/2022.

## ಅಲ್ಪಾವಧಿ ಇ-ಪ್ರೊಕ್ಯುರ್‌ಮೆಂಟ್ ಟೆಂಡರ್ ಪ್ರಕಟಣೆ (2ನೇ ಕರೆ)

*******

ದೀನ್‌ದಯಾಳ್ ಅಂತ್ಯೋದಯ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆ ನಗರ ವಸತಿ ರಹಿತರಿಗೆ 2007 ರಾಷ್ಟ್ರೀಯ ನಗರ ವಸತಿ ಮತ್ತು ನೆಲೆ ನೀತಿಯು, ಸಮಾಜದ ಎಲ್ಲಾ ವರ್ಗಗಳಿಗೂ ಕೈಗೆಟುಕುವ ದರದಲ್ಲಿ ಭೂಮಿ, ವಸತಿ ಮತ್ತು ಸೇವೆಗಳನ್ನು ನ್ಯಾಯಯುತವಾದ ರೀತಿಯಲ್ಲಿ ಒದಗಿಸುವ ದೃಷ್ಟಿಯಿಂದ ದೇಶದಲ್ಲಿ ವಸತಿ ನೆಲೆಯ ಸ್ಥಿತ ರೂಪದ ಅಭಿವೃದ್ಧಿಯನ್ನು ಪ್ರವರ್ತಿಸುವ ಗುರಿಯನ್ನು ಹೊಂದಿರುತ್ತದೆ. ಇವರಲ್ಲಿ ಅತ್ಯಂತ ದುರ್ಬಲರೆಂದರೆ ವಸತಿ ರಹಿತರು. ನಗರ ವಸತಿ ರಹಿತರು ಬಡವರು ಅಲ್ಪ ಬೆಲೆಯ ಶ್ರಮದ ಮೂಲಕ ನಗರಗಳ ಆರ್ಥಿಕತೆಗೆ ಕೊಡುಗೆ ನೀಡುತ್ತಾ ತನ್ಮೂಲಕ ಅರ್ಥ ವ್ಯವಸ್ಥೆಯ ಅನೌಪಚಾರಿಕ ಕ್ಷೇತ್ರಕ್ಕೆ ಕೂಡ ತಮ್ಮ ಕೊಡುಗೆ ಅವರು ಆಶ್ರಯವಿಲ್ಲದೆ ಸಾಮಾಜಿಕ ರಕ್ಷಣೆಯಿಲ್ಲದೆ ಬದುಕುತ್ತಿರುವ ನಗರದ ವಸತಿ ರಹಿತರಿಗೆ ಆರೋಗ್ಯ, ಶಿಕ್ಷಣ, ಆಹಾರ, ನೀರು ಮತ್ತು ನೈರ್ಮಲ್ಯ ಮುಂತಾದಂತಹ ಪ್ರಾಥಮಿಕ ಸೇವೆಗಳನ್ನು ಒದಗಿಸುವುದು ಹಾಗೂ ಇವರಿಗೆ ನಿರಾಶ್ರಿತರ ತಂಗುದಾಣವನ್ನು ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ 2021-22ನೇ ಸಾಲಿನಲ್ಲಿ ಡೇ-ನಲ್ಮ್ ಯೋಜನೆಯಡಿ ನಿರಾಶ್ರಿತರ ತಂಗುದಾಣವನ್ನು ತೆರೆಯಲು ಗುರುತಿಸಲಾಗಿರುವ ಕಟ್ಟಡದಲ್ಲಿ ಕೇಂದ್ರವನ್ನು ನಿರ್ವಹಣೆ ಮಾಡಲು ಡೇ-ನಲ್ಮ್ ಯೋಜನೆಯ ವಸತಿರಹಿತರಿಗೆ ಅಶ್ರಯ ಉಪಘಟಕದ ಅನುದಾನದಡಿಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧ ಈ ಹಿಂದೆ ಆಹ್ವಾನಿಸಿದ್ದ ಟೆಂಡರ್‌ನಲ್ಲಿ ಒಂದು ಸಂಸ್ಥೆ ಮಾತ್ರ ಬಾಗವಹಿಸಿದ್ದರಿಂದ 2ನೇ ಬಾರಿಗೆ ಕರ್ನಾಟಕ ಪಾರದರ್ಶಕತೆ ಮಸೂದೆ ನಿಯಮ 1999 ಮತ್ತು 2000 ಕೆಟಿಟಿಪಿ ನಿಯಮಾವಳಿಗಳ ಅನುಸಾರ ನೊಂದಾಯಿತ ಸರ್ಕಾರಿ/ಸರ್ಕಾರೇತರ ಅರ್ಹ ಗುತ್ತಿಗೆದಾರ/ಸ್ವಯಂ ಸೇವಾ ಸಂಘ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಏಕ ಲಕೋಟೆ ಪದ್ದತಿಯ ಅನುಸಾರ ಅಲ್ಪಾವದಿ ಟೆಂಡರ್ ಆಹ್ವಾನಿಸಲಾಗಿದೆ.

ಕೇಂದ್ರದ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಕೇಂದ್ರಗಳ ವಿವರ | ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂ.ಗಳಲ್ಲಿ | ಟೆಂಡರ್ ಪ್ರಕ್ರಿಯೆ ವೆಚ್ಚ |
|---|---|---|---|---|
| 1. | ಬಿ.ಎಂ.ಟಿ.ಸಿ ಕಟ್ಟಡ 3ನೇ ಮಹಡಿ, ಬಸ್ ನಿಲ್ದಾಣ, ಯಶವಂತಪುರ ವೃತ್ತ ಯಶವಂತಪುರ ಕಟ್ಟಡದ ಪ್ರದೇಶದಲ್ಲಿ ನಿರಾಶ್ರಿತರ ತಂಗುದಾಣದ ವಾರ್ಷಿಕ ನಿರ್ವಹಣೆಗೆ (ಮಹಿಳೆಯರಿಗೆ) | 8,54,729/- | 17095/- | ಇ-ಸಂಗ್ರಹಣಾ ಅನುಸಾರ |

............2ನೇ ಪು.ತಿ.ನೋ.

1. ಟೆಂಡರ್ ದಾಖಲೆಗಳನ್ನು ದಿನಾಂಕ:09/03/2022 ರಿಂದ Government of Karnataka E-Procurement. Website: https://eproc.karnataka.gov.in/eportal/index.seam under login for contractors ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ:16/03/2022ರ ಸಂಜೆ 3:30 ಗಂಟೆಯವರೆಗೆ.
3. ತಾಂತ್ರಿಕ ಪ್ರಸ್ತಾವನೆಯ ಬಿಡ್ ತೆರೆಯುವ ದಿನಾಂಕ:18/03/2022ರ ಸಂಜೆ 4:00ಕ್ಕೆ.
4. ಆರ್ಥಿಕ ಪ್ರಸ್ತಾವನೆಯ ಬಿಡ್ ತೆರೆಯುವ ದಿನಾಂಕ:21/03/2022ರ ಸಂಜೆ 4.30ಕ್ಕೆ.ಅಥವಾ ಮುಂದಿನ ದಿನಾಂಕದಂದು.

ಜಂಟಿ ಆಯುಕ್ತರು (ರಾ.ರಾ.ನಗರ)ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.